ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ವ್ಯಾಪ್ತಿ

1035 (1262) - ಶ್ರೀ ಹಂಪನಗೌಡ ಬಾದರ್ಲಿ, (ಸಿಂಧನೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಟೌನ್ ಪ್ರಾಧಿಕಾರಕ್ಕೆ ಬಡಾವಣೆಗಳನ್ನು ರಚಿಸುವ ಅಧಿಕಾರ ಇದೆಯೇ: ಅಥವಾ ಇದಕ್ಕಾಗಿ ರಾಜ್ಯ ಸರ್ಕಾರದ ಪರವಾನಿಗೆಯ ಅವಶ್ಯಕತೆ ಇದೆಯೇ: ಪ್ರಾಧಿಕಾರದ ಅಧಿಕಾರ ವ್ಯಾಪ್ತಿ ಏನು?

ಆ) ಸಿಂಧನೂರಿನ ನಗರ ಪ್ರಾಧಿಕಾರ ಎಷ್ಟು ಬಡಾವಣೆಗಳಲ್ಲಿ ಲೇಔಟ್ ಮಾರ್ಪಾಡು ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ನಗರ ಯೋಜನಾ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪರಿಚ್ಛೇದ 26 ರ ಅಡಿಯಲ್ಲಿ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದಿಂದ ನಂತರವೇ ಬಡಾವಣೆಗಳನ್ನು ರಚಿಸುವ ಅಧಿಕಾರ ಹೊಂದಿರುತ್ತದೆ. ನಗರ ಯೋಜನಾ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ವಿವರಗಳು ಈ ಕೆಳಕಂಡಂತಿವೆ:-

1) ಸ್ಥೂಲಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆ ತಯಾರಿಸುವುದು.
2) ಅನುಮೋದಿತ ಯೋಜನೆಗಳ ವಲಯ ನಿಯಮಾವಳಿಗಳನ್ನು ಕಾರ್ಯಾಚರಣೆಗೆ ತರುವುದು.
3) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪರಿಚ್ಛೇದ 14 'ಎ' ರ ಅಡಿಯಲ್ಲಿ ಭೂ ಬದಲಾವಣೆ ಪ್ರಕ್ರಿಯೆ, ಕಟ್ಟಡ ಮತ್ತು ಖಾಸಗಿ ಬಡಾವಣೆಗಳಿಗೆ ಕಾಯ್ದೆಯ ಪರಿಚ್ಛೇದ 17ರನ್ವಯ ಅನುಮೋದನೆ ನೀಡುವುದು.
4) ವಿವಿಧ ಇಲಾಖೆಗಳಿಗೆ ಯೋಜನಾ ವಿಷಯಗಳಲ್ಲಿ ತಾಂತ್ರಿಕ ನೆರವು ನೀಡುವುದು.

ಆ) ಸಿಂಧನೂರು ನಗರಯೋಜನಾ ಪ್ರಾಧಿಕಾರವು ಕೆಳಕಂಡ 3 ಲೇ ಔಟ್‌ಗಳನ್ನು ರಚಿಸಿದೆ.

1) ಸಿಂಧನೂರು ಗ್ರಾಮದ ರಿ: ಸ:ನಂ:777
2) ಸಿಂಧನೂರು ಗ್ರಾಮದ ರಿ:ಸ:ನಂ:777-1ಬಿ
3) ಸಿಂಧನೂರು ಗ್ರಾಮದ ರಿ:ಸ:ನಂ:777-1ಸಿ

ಅಬಕಾರಿ ಇಲಾಖೆಯಿಂದ ಬಂದ ಆದಾಯ

1039 (486) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1999-2000, 2000-01, 2001-02ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಬಂದ ಆದಾಯ ಎಷ್ಟು: ಜಿಲ್ಲಾವಾರು ವಿವರ ನೀಡುವುದು.

ಆ) ರಾಜ್ಯದಲ್ಲಿ ಸೆಕೆಂಡ್ಸ್ ಹಾವಳಿ ತಡೆಗಟ್ಟಲು ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ವಿವರಗಳು ಕೆಳಕಂಡಂತಿರುತ್ತವೆ:-